## ೭ ಅಭಾವ

ಕಣಾದರು ಆರು ಪದಾರ್ಥಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ. ಆದರೆ, ಮುಂದಿನ ಕೆಲವು ವೈಶೇಷಿಕರು ಏಳನೆಯದಾಗಿ 'ಅಭಾವ' ಪದಾರ್ಥವನ್ನು ಅಂಗೀಕರಿಸಿದ್ದಾರೆ. ಅಭಾವವೆಂದರೆ ಇಲಿಯ ಕೊಂಬಿನಂತೆಯಾಗಲಿ ಅಥವಾ ಗಗನಪುಷ್ಪದಂತೆಯಾಗಲೀ ಅಸದ್ವಸ್ತುವಲ್ಲ. ಈ ಅಭಾವವು **ಸಂಸರ್ಗಾಭಾವ** ಮತ್ತು **ಅನ್ಯೋನ್ಯಾಭಾವ**ವೆಂದು ಎರಡು ವಿಧ. ಸಂಸರ್ಗಾಭಾವವು ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ ಎಂದು ಮೂರು ವಿಧ. ಘಟವು ಉತ್ಪನ್ನವಾಗುವ ಮೊದಲಿನ ಸ್ಥಿತಿಯನ್ನು ಘಟಪ್ರಾಗಭಾವವೆಂದೂ, ಘಟವು ನಾಶವಾದ ಮೇಲಿನ ಸ್ಥಿತಿಯನ್ನು ಪ್ರಧ್ವಂಸಾಭಾವವೆಂದೂ, ಸರ್ವಥಾ ಘಟದ ಇಲ್ಲದಿರುವಿಕೆಯು ಅತ್ಯಂತಾಭಾವವೆಂದೂ ಭಾವಿಸಬಹುದು. ಘಟವು ಪಟವಲ್ಲ ಎಂಬ ಅಭಾವವು ಅನ್ಯೋನ್ಯಾಭಾವವೆಂದು ಹೇಳಲಾಗಿದೆ. ವೈಶೇಷಿಕದರ್ಶನದಲ್ಲಿ ಪದಾರ್ಥವು ಭಾವಪದಾರ್ಥ ಮತ್ತು ಅಭಾವಪದಾರ್ಥಗಳೆಂದು ಎರಡು ವಿಧ. ಈ ದರ್ಶನದಲ್ಲಿ ಸಪ್ತಪದಾರ್ಥಗಳ ವಿಶೇಷವಾದ ಪರಿಜ್ಞಾನಕ್ಕಾಗಿ ವಿಸ್ತಾರವಾದ ವಿವರಣೆಯನ್ನು ನೀಡಲಾಗಿದೆ.

## ಉಪಸಂಹಾರ

ಕಣಾದರು ಪ್ರತ್ಯಕ್ಷ ಮತ್ತು ಅನುಮಾನಗಳೆಂಬ ಎರಡೇ ಪ್ರಮಾಣಗಳನ್ನು ಅಂಗೀಕರಿಸಿದರೂ ವೇದವು ಅಪ್ರಮಾಣವೆಂದು ಹೇಳಿಲ್ಲ. **ತದ್ವಚನಾದಾಮ್ನಾಯಸ್ಯ ಪ್ರಾಮಾಣ್ಯಮ್** ಎಂಬ ಮಾತಿನಿಂದ ವೇದದ ಪ್ರಾಮಾಣ್ಯವನ್ನು ಆಪ್ತವಾಕ್ಯವೆಂದು ಅಂಗೀಕರಿಸಿದ್ದಾರೆ. ಆದರೆ, ಇವರು ವೇದವನ್ನು ಸ್ವತಂತ್ರ ಪ್ರಮಾಣವೆಂದು ಭಾವಿಸುವುದಿಲ್ಲ.

ಒಟ್ಟಿನಲ್ಲಿ ಪ್ರಮಾಣ ಮತ್ತು ಪ್ರಮೇಯಾತ್ಮಕವಾದ ಈ ಪ್ರಪಂಚದ ಪರಿಜ್ಞಾನವನ್ನು ವೈಶೇಷಿಕದರ್ಶನ ವಿವೇಚಿಸಿ ಪ್ರದರ್ಶಿಸಿದೆ. ಮಾನವನು ತನ್ನ ಬುದ್ಧಿಮತ್ತೆಯಿಂದ ಪರೀಕ್ಷಿಸಿ ಮುನ್ನಡೆಯಬೇಕು; ಮೌಢ್ಯಕ್ಕಾಗಲಿ, ಪರಾನುಕರಣೆಗಾಗಲಿ ಆಸ್ಪದವನ್ನು ಕೊಡಬಾರದು. ವ್ಯಕ್ತಿಯು ಸ್ವಾವಲಂಬಿಯಾಗಬೇಕು ಮತ್ತು ತನ್ನ ಹಿತವನ್ನು ವಿಹಿತಕರ್ಮಗಳಿಂದ ಅಂದರೆ ಶಾಸ್ತ್ರದಲ್ಲಿ ತಿಳಿಸಿದ ಕರ್ಮಗಳಿಂದ ಸಾಧಿಸಿಕೊಂಡು ಮುಕ್ತಿಯನ್ನು ಸಂಪಾದಿಸಿಕೊಳ್ಳಬೇಕು.

ಮುಕ್ತಿಸಂಪಾದನೆಗೆ ಈಶ್ವರನು ಸಹಾಯಮಾಡುತ್ತಾನೆ. ಅಂದರೆ ಈಶ್ವರನು ನಮ್ಮ ಮುಕ್ತಿಗೆ ನಿಮಿತ್ತ ಕಾರಣನು. ಈ ದರ್ಶನದಲ್ಲಿ ಹೇಳಿದಂತೆ ಸಕಲ ಕಾರ್ಯಗಳಿಗೂ ಈಶ್ವರನೇ ಕಾರಣನಾಗಿರುತ್ತಾನೆ. ಪರಮೇಶ್ವರನು ನಿಯಮಿಸಿದ ನಿಯಮಗಳ ಉಲ್ಲಂಘನೆಯಿಂದ ಸಂಸಾರದ ಪ್ರಾಪ್ತಿಯೂ, ಅವನು ವಿಧಿಸಿದ ನಿಯಮಗಳ ಪರಿಪಾಲನೆಯಿಂದ ಮೋಕ್ಷಪ್ರಾಪ್ತಿಯೂ ಉಂಟಾಗುವುದು.

## ಸ್ನೇಹಪ್ರಭ

**ಬೇರೆಯವರ ನಿಂದೆ ಅಥವಾ ತಿರಸ್ಕಾರಗಳು ಮನಸ್ಸಿನ ಮೇಲೆ ವಿಪರೀತ ಪರಿಣಾಮವನ್ನು ಉಂಟುಮಾಡುತ್ತವೆ. ಅವುಗಳನ್ನು ತಡೆದುಕೊಳ್ಳುವುದು ಹೇಗೆ?**

ನಾವು ಪ್ರಶಂಸೆ ಗೌರವ ಇತ್ಯಾದಿಗಳನ್ನು ಅತಿಯಾಗಿ ಬಯಸಿದರೆ, ನಿಂದೆ ಅಷ್ಟೇ ಅಸಹನೀಯವಾಗುತ್ತದೆ. ಆದ್ದರಿಂದ 'ತುಲ್ಯನಿಂದಾಸ್ತುತಿ' ಗಳಾಗಿರಬೇಕು. ನಾವು ಅತಿಯಾಗಿ ಸುಖವನ್ನು ಬಯಸಿದರೆ ಅಲ್ಪದುಃಖವೂ ನಮಗೆ ಅಪಾರವೆನಿಸುತ್ತದೆ. ಈ ಪ್ರಪಂಚದಲ್ಲಿ ಯಾವುದೇ ಒಂದನ್ನು ಅತಿಯಾಗಿ ಬಯಸಿದರೂ ಅದಕ್ಕೆ ವಿರುದ್ಧವಾದುದು ನಮಗೆ ತುಂಬ ದುಃಖದಾಯಕವಾಗುತ್ತದೆ. ಇಲ್ಲಿ ನೆಮ್ಮದಿಯಿಂದ ಬಾಳಬೇಕಾದರೆ ಸ್ವಲ್ಪಮಟ್ಟಿಗಾದರೂ ನಾವು 'ದ್ವಂದ್ವಾತೀತ' ರಾಗಬೇಕು.

ನಿಂದೆ ನಮ್ಮನ್ನು ಅಂತರ್ಮುಖಿಗಳನ್ನಾಗಿ ಮಾಡಬೇಕು. ನಮ್ಮನ್ನು ಯಾರಾದರೂ ನಿಂದಿಸಿದಾಗ, ನಮ್ಮಲ್ಲಿ ನಿಂದನೀಯ ಅಂಶವೇನಾದರೂ ಇದೆಯೇ ಎಂದು ನಾವು ನಮ್ಮ ಒಳಹೊಕ್ಕು ವಿಶ್ಲೇಷಿಸಿ ನೋಡಬೇಕು. ನಾವಾರೂ ಪರಿಪೂರ್ಣ ವ್ಯಕ್ತಿಗಳಲ್ಲ. ನಮ್ಮಲ್ಲಿ ತಿರಸ್ಕಾರಯೋಗ್ಯವಾದ ಹಲವು ಅಂಶಗಳು ಇರಲು ಸಾಧ್ಯ. ಅದನ್ನು ವಸ್ತುನಿಷ್ಠವಾಗಿ ಗುರುತಿಸಲು ಸಾಧ್ಯವಾದರೆ ನಿಂದೆ ಸ್ವಾಗತಾರ್ಹವೇ ಆಗುತ್ತದೆ. ಯಾರಾದರೂ ನನ್ನನ್ನು ನಿಂದಿಸಿದಾಗ ಅವರು ನಿಂದಿಸುವ ದೋಷವೇ ನಮ್ಮಲ್ಲಿ ಇರಬೇಕೆಂದಿಲ್ಲ. ನಿಂದನಾರ್ಹವಾದ ಬೇರೆ ದೋಷಗಳು ಇರಬಹುದಾದ್ದರಿಂದ ಈ ನಿಂದೆಯನ್ನು ಸ್ವೀಕರಿಸುವುದು ಒಳ್ಳೆಯದು. ನಮ್ಮನ್ನು ತಿದ್ದಿಕೊಳ್ಳುವುದಕ್ಕೆ ಇರುವ ಅವಕಾಶವೆಂದು ಭಾವಿಸಿ ನಿಂದೆಯನ್ನು ನಾವು ವಿಧೇಯಾತ್ಮಕವಾಗಿ ಸ್ವೀಕರಿಸಬೇಕು. ಅದು ನಿಂದನೀಯವಾಗಬಾರದು.

ಎಲ್ಲರೂ ನಮ್ಮನ್ನು ಹೊಗಳುತ್ತಿದ್ದರೆ ನಮ್ಮನ್ನು ನಾವು ತಿದ್ದಿಕೊಳ್ಳುವ ಅವಕಾಶವೇ ಇರುವುದಿಲ್ಲ. ನಿಂದಕರು ನಮಗೆ ಕನ್ನಡಿಯಂತೆ, ನಮ್ಮ ದೋಷಗಳನ್ನು ಎತ್ತಿತೋರಿಸುತ್ತಾರೆ. ಅದಕ್ಕೇ ದಾಸರು 'ನಿಂದಕರಿರಬೇಕು' ಎಂದು ಹೇಳುತ್ತಾರೆ. ಉನ್ನತ ಆದರ್ಶದ ಕಡೆಗೆ ನಾವು ಹೆಚ್ಚು ಒಲವನ್ನು ಬೆಳಸಿಕೊಂಡಷ್ಟೂ ನಿಂದಾಸ್ತುತಿಗಳಿಂದ ಹೆಚ್ಚು ವಿಚಲಿತರಾಗುವುದಿಲ್ಲ.

ಸ್ವಾಮಿ ವಿವೇಕಾನಂದರು ನಿಂದಕರಿಗೆ ಹೇಳುವ ಕಿವಿಮಾತು ಇದು: "ಇತರರ ದೋಷಗಳು, ಅವು ಎಷ್ಟೇ ಹೇಯವಾಗಿದ್ದರೂ, ಅವುಗಳ ಕುರಿತು ಮಾತನಾಡದಿರಿ. ಏಕೆಂದರೆ ಅದರಿಂದ ಏನೂ ಪ್ರಯೋಜನವಿಲ್ಲ. ಅಷ್ಟೇ ಅಲ್ಲ, ವ್ಯಕ್ತಿಯೊಬ್ಬನ ಬಳಿ ಅವನ ದೋಷಗಳ ಕುರಿತಾಗಿ ಮಾತನಾಡುವುದರಿಂದ ನೀವು ಅವನನ್ನು ಗಾಸಿಗೊಳಿಸಿದಂತಾಗುತ್ತದೆ ಮತ್ತು ಸ್ವತಃ ನೀವೂ ಗಾಸಿಗೊಳ್ಳುವಿರಿ. ಪ್ರತಿಯೊಬ್ಬರಲ್ಲಿಯೂ ಇರುವ ಗುಣಾಂಶಗಳನ್ನು ಗುರುತಿಸಲು ಅಭ್ಯಾಸ ಮಾಡಬೇಕು"

ಮೇಲಿನ ಬೋಧನೆ ನಮ್ಮ ಬಾಳಿನಲ್ಲಿ ಅನುಷ್ಠಾನಗೊಂಡಾಗ, ನಾವು ಕೂಡ ಬೇರೆಯವರನ್ನು ನಿಂದಿಸುವುದಿಲ್ಲ. ಹೀಗೆ ಪರಸ್ಪರರು ನಿಂದಿಸದೆ ಇದ್ದಾಗ, ಸಮಾಜದಲ್ಲಿ ಎಷ್ಟೋ ಮಾನಸಿಕ ಶಾಂತಿ ಉಂಟಾಗುತ್ತದೆ, ಸಾಮರಸ್ಯ ಸಿದ್ಧಿಸುತ್ತದೆ.

(ಬರಹ: ಸ್ವಾಮಿ ನಿತ್ಯಸ್ಥಾನಂದ)

ಷಡ್‌ದರ್ಶನ ಪರಿಚಯ

# ಸಾಂಖ್ಯದರ್ಶನದಲ್ಲಿ ಪ್ರಕೃತಿ–ಪುರುಷ ವಿವೇಕ

ವಿದ್ವಾನ್ ಶೇಷಾಚಲ ಶರ್ಮಾ

**ಸಾಂಖ್ಯದರ್ಶನವು ಭಾರತೀಯ ದರ್ಶನಗಳಲ್ಲಿ ಅತಿ ಪ್ರಾಚೀನವಾದ ದರ್ಶನಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಪ್ರಕೃತಿ–ಪುರುಷ ವಿವೇಕವೇ ಇದರ ತಿರುಳು, ಅತಿ ಗಹನವಾದ ಈ ವಿಚಾರವನ್ನು ಸುಲಭವಾಗಿ ಅರ್ಥವಾಗುವಂತೆ ಬರೆದುಕೊಟ್ಟಿರುವ ಲೇಖಕರು ಮೈಸೂರು ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು; ವೇದಾಂತ, ದರ್ಶನ, ಅಲಂಕಾರಗಳಲ್ಲಿ ವಿಶೇಷ ಪಾಂಡಿತ್ಯವುಳ್ಳವರು.**

**ಸಾಂ**ಖ್ಯಕಾರಿಕೆಯ ಮಾಠರ ವೃತ್ತಿಯಲ್ಲಿ ಕಪಿಲ ಮಹರ್ಷಿಯ ಮಹಿಮೆ ಹೀಗೆ ಉಕ್ತವಾಗಿದೆ:

**ಕಪಿಲಾಯ ನಮಸ್ತಸ್ಮೈ ಯೇನಾವಿದ್ಯೋದಧೌ ಜಗತಿ ಮಗ್ನೇ ।**
**ಕಾರುಣ್ಯಾತ್ ಸಾಂಖ್ಯಮಯೀ ನೌರಿಹ ವಿಹಿತಾ ಪ್ರತರಣಾಯ ॥**


"ಜಗತ್ತೆಲ್ಲವೂ ಅವಿದ್ಯೆಯೆಂಬ ಸಾಗರದಲ್ಲಿ ಮಗ್ನವಾಗಿ ಹೋಗಿರುವಾಗ ಅದನ್ನು ದಾಟಿಸಲು ಕರುಣೆಯಿಂದ ಸಾಂಖ್ಯವೆಂಬ ನೌಕೆಯನ್ನು ರಚಿಸಿದ ಕಪಿಲಮುನಿಗೆ ನಮಸ್ಕಾರಗಳು." ಈ ಕಪಿಲಮುನಿಯೇ ಸಾಂಖ್ಯಶಾಸ್ತ್ರದ ಪ್ರವರ್ತಕರಾಗಿದ್ದಾರೆ.

ಮಾನವನು ದುಃಖನಿವೃತ್ತಿಯನ್ನು ಅಪೇಕ್ಷಿಸುತ್ತಾನೆ. ಜನ್ಮ–ಮರಣ–ಚಕ್ರದಲ್ಲಿ ಸಿಕ್ಕಿಕೊಳ್ಳುವುದೇ ದುಃಖಕ್ಕೆ ಕಾರಣ. ಅದರಿಂದಾಗಿ ಮಾನವನು ಅನೇಕ ಕ್ಲೇಶಗಳಿಗೆ ಈಡಾಗುತ್ತಾನೆ. ದುಃಖಕ್ಕೆ ಕಾರಣ ಅವಿದ್ಯೆ ಅಥವಾ ಅಜ್ಞಾನ. **ಅನಿತ್ಯ–ಅಶುಚಿ–ದುಃಖ–ಅನಾತ್ಮಸು ನಿತ್ಯ–ಶುಚಿ–ಸುಖ–ಆತ್ಮಖ್ಯಾತಿಃ ಅವಿದ್ಯಾ** (*ಯೋಗಸೂತ್ರ ೨ : ೫* ) ಎಂಬ ಯೋಗಸೂತ್ರವು ಅವಿದ್ಯೆಯ ಸ್ವರೂಪವನ್ನು ವಿವರಿಸುತ್ತದೆ. ಅನಿತ್ಯವಾದುದನ್ನು ನಿತ್ಯವೆಂದು ಭಾವಿಸುವುದು, ಅಶುಚಿಯನ್ನು ಶುಚಿಯೆಂದು ತಿಳಿಯುವುದು, ದುಃಖವನ್ನು ಸುಖವೆಂದು ಅರಿಯುವುದು ಮತ್ತು ಆತ್ಮವನ್ನು ಅನಾತ್ಮವೆಂದು ತಿಳಿಯುವುದು ಅವಿದ್ಯೆ. ಅವಿದ್ಯೆಗೆ ವಿರುದ್ಧವಾದುದು ವಿದ್ಯೆ ಅಥವಾ ಜ್ಞಾನ.

**ಋತೇ ಜ್ಞಾನಾತ್ ನ ಮುಕ್ತಿಃ** – ಜ್ಞಾನ ಅಥವಾ ವಿದ್ಯೆ ಮಾತ್ರವೇ ದುಃಖನಿವೃತ್ತಿರೂಪವಾದ ಮೋಕ್ಷಕ್ಕೆ ಏಕಮಾತ್ರ ಉಪಾಯ. ಕಠೋಪನಿಷತ್ತು ಸಹ ಇದನ್ನೇ ಹೀಗೆ ಸಮರ್ಥಿಸುತ್ತದೆ:

**ಯದಾ ಸರ್ವೇ ವಿಮುಚ್ಯಂತೇ ಕಾಮಾ ಹ್ಯಸ್ಯ ಹೃದಿ ಸ್ಥಿತಾಃ ।**
**ತದಾ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ ॥**

"ಹೃದಯದಲ್ಲಿರುವ ಎಲ್ಲ ಕಾಮನೆಗಳಿಂದಲೂ ವಿಮುಕ್ತವಾದಾಗ ಮರ್ತ್ಯನು ಅಮರ್ತ್ಯನಾಗುತ್ತಾನೆ. ಇಲ್ಲಿಯೇ ಬ್ರಹ್ಮವನ್ನು ಸೇರುತ್ತಾನೆ." (*ಕಠೋಪನಿಷತ್ತು, ೨ : ೬ : ೧೪* )




## 'ಸಾಂಖ್ಯ' ಎಂದರೇನು?

ಇಂಥ ಮೋಕ್ಷವನ್ನು ಪಡೆಯಲು ದರ್ಶನಕಾರರು ಅನೇಕ ಉಪಾಯಗಳನ್ನು ನಿರೂಪಿಸಿದ್ದಾರೆ. ಪ್ರಕೃತಿ–ಪುರುಷ ವಿವೇಕವೇ ದುಃಖನಿವೃತ್ತಿರೂಪವಾದ ಮೋಕ್ಷಕ್ಕೆ ಕಾರಣವೆಂದು ಸಾಂಖ್ಯ ದರ್ಶನವು ಪ್ರತಿಪಾದಿಸುತ್ತದೆ. ಭಾರತೀಯ ದರ್ಶನಗಳಲ್ಲಿ ಸಾಂಖ್ಯ ದರ್ಶನವು ಅತ್ಯಂತ ಪ್ರಾಚೀನವಾದುದೆಂಬ ಭಾವನೆಯಿದೆ. 'ಸಂಖ್ಯಾ' ಶಬ್ದಕ್ಕೆ 'ಎಣಿಕೆ' ಎಂಬ ಅರ್ಥ ಪ್ರಸಿದ್ಧವಾಗಿದೆ. ತತ್ತ್ವಗಳ ಎಣಿಕೆಯನ್ನು ಇಪ್ಪತ್ತನಾಲ್ಕು ಎಂದು ಮಾಡುವುದರಿಂದ ಈ ದರ್ಶನಕ್ಕೆ 'ಸಾಂಖ್ಯದರ್ಶನ' ವೆಂದು ಹೆಸರು ಬಂದಿದೆ ಎಂದು ಹೇಳುತ್ತಾರೆ. ಮಹಾಭಾರತದಲ್ಲಿಯೂ ಇದರ ಉಲ್ಲೇಖ ಹೀಗಿದೆ:

**ಸಂಖ್ಯಾ ಪ್ರಕುರ್ವತೇ ಚೈವ ಪ್ರಕೃತಿಂ ಚ ಪ್ರಚಕ್ಷತೇ ।**
**ತತ್ತ್ವಾನಿ ಚ ಚತುರ್ವಿಂಶತ್ ತೇನ ಸಾಂಖ್ಯಾಃ ಪ್ರಕೀರ್ತಿತಾಃ ॥**

"ಎಣಿಕೆಯನ್ನು ಮಾಡುತ್ತಾರೆ. ಪ್ರಕೃತಿಯನ್ನೂ ಪ್ರತಿಪಾದಿಸುತ್ತಾರೆ. ಇಪ್ಪತ್ತನಾಲ್ಕು ಪ್ರಕೃತಿತತ್ತ್ವಗಳನ್ನು ಹೇಳುತ್ತಾರೆ. ಆದುದರಿಂದ ಅಂಥವರು 'ಸಾಂಖ್ಯರು' ಎಂದು ಪ್ರಸಿದ್ಧರಾಗಿದ್ದಾರೆ."

ಆದರೆ ಈ ರೀತಿಯ ವಿವರಣೆಯು ಸಾಧುವಾದುದಲ್ಲ. ಸಾಮಾನ್ಯವಾಗಿ ಪ್ರತಿಯೊಂದು ದರ್ಶನದಲ್ಲೂ ತತ್ತ್ವಗಳ ಎಣಿಕೆಯು ಇದ್ದೇ ಇರುತ್ತದೆ. ಮಹಾಭಾರತದಲ್ಲಿಯೇ 'ಸಂಖ್ಯಾ' ಶಬ್ದದ ಇನ್ನೊಂದು ವಿವರಣೆಯು ಈ ರೀತಿ ದೊರಕುತ್ತದೆ:

**ದೋಷಾಣಾಂ ಚ ಗುಣಾನಾಂ ಚ ಪ್ರಮಾಣಂ ಪ್ರವಿಭಾಗತಃ।**
**ಕಂಚಿದರ್ಥಮಭಿಪ್ರೇತ್ಯ ಸಾ ಸಂಖ್ಯೇತ್ಯುಪಧಾರ್ಯತಾಮ್॥**

"ಒಂದು ವಸ್ತುವಿನ ವಿಷಯದಲ್ಲಿ ದೋಷಗಳ ಮತ್ತು ಗುಣಗಳ ಪರೀಕ್ಷೆಯನ್ನು ಮಾಡುವುದು 'ಸಂಖ್ಯಾ' ಎನಿಸುತ್ತದೆ."

**ಶುದ್ಧಾತ್ಮತತ್ತ್ವವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ** – ಶುದ್ಧವಾದ ಆತ್ಮತತ್ತ್ವವನ್ನು ತಿಳಿಯುವುದೇ ಸಾಂಖ್ಯವೆನಿಸುತ್ತದೆ ಎಂದು ಶ್ರೀಶಂಕರರು ತಮ್ಮ 'ವಿಷ್ಣುಸಹಸ್ರನಾಮಭಾಷ್ಯ' ದಲ್ಲಿ ಹೇಳಿದ್ದಾರೆ.

ಕಪಿಲಮುನಿಯಿಂದ ಸಾಂಖ್ಯದರ್ಶನವು ಪ್ರವರ್ತಿತವಾಯಿತು. **ಆಸುರ, ಪಂಚಶಿಖ** ಮತ್ತು **ಈಶ್ವರಕೃಷ್ಣ** ಮೊದಲಾದ ಮಹಾತ್ಮರ ಪರಂಪರೆಯಲ್ಲಿ ಈ ದರ್ಶನವು ಬೆಳೆದುಬಂದಿದೆ. ಕಪಿಲಮುನಿಯ ಹೆಸರಿನಲ್ಲಿ ಈಗ ದೊರಕುವ ಸಾಂಖ್ಯಸೂತ್ರಗಳು ಕಪಿಲಮುನಿಕೃತವಲ್ಲ ಎಂದು ಪ್ರತೀತಿಯಿದೆ. ಹದಿನಾರನೆಯ ಶತಮಾನ ಅಥವಾ ಹಿಂದಕ್ಕೆ ಇದ್ದ ವಿಜ್ಞಾನಭಿಕ್ಷುವು ಕಪಿಲಮುನಿಯ ಹೆಸರಿನಲ್ಲಿ ಈ ಸೂತ್ರಗಳನ್ನು ರಚಿಸಿದನೆಂದು ಹೇಳುತ್ತಾರೆ. ಶ್ರೀಶಂಕರ ಭಗವತ್ಪಾದರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಸಾಂಖ್ಯಕಾರಿಕೆಯ ಶ್ಲೋಕಗಳನ್ನು ಮಾತ್ರವೇ ಉಲ್ಲೇಖಿಸಿರುವುದು ಇದಕ್ಕೆ ಪುಷ್ಟಿಕೊಡುತ್ತದೆ.

## ಪ್ರಕೃತಿ–ಪುರುಷ

ಪ್ರಕೃತಿಯು ಬೇರೆ, ಪುರುಷ (ಆತ್ಮ) ಬೇರೆ ಎಂದು ವಿವೇಚನೆ ಮಾಡಿ ತಿಳಿಯುವುದೇ ದುಃಖನಿವೃತ್ತಿರೂಪವಾದ ಮೋಕ್ಷಕ್ಕೆ ಉಪಾಯ. ಶ್ವೇತಾಶ್ವತರ ಉಪನಿಷತ್ತಿನ ಈ ಮಂತ್ರವನ್ನು ಪ್ರಕೃತಿಯ ಸಮರ್ಥನೆಗಾಗಿ ಸಾಂಖ್ಯರು ಉಲ್ಲೇಖಿಸುತ್ತಾರೆ: **ಅಜಾಮೇಕಾಂ ಲೋಹಿತ ಕೃಷ್ಣಶುಕ್ಲಾಮ್ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ** – **ಅಜಾ** ಎಂದರೆ ಹುಟ್ಟದಿರುವುದು; ಅಂದರೆ ನಿತ್ಯವಾದುದು. **ಲೋಹಿತ ಕೃಷ್ಣಶುಕ್ಲಾ** ಎಂಬ ಶಬ್ದದಿಂದ **ರಜಸ್ಸು, ತಮಸ್ಸು** ಮತ್ತು **ಸತ್ವ** ಎಂಬ ಗುಣತ್ರಯಸಾಮ್ಯರೂಪವಾದ ಪ್ರಕೃತಿಯು ಹೇಳಿದೆ. **ಏಕಾ** ಶಬ್ದದಿಂದ ಇದಕ್ಕೆ ಸಮಾನವಾದುದು ಇನ್ನಾವುದೂ ಇಲ್ಲ ಎಂಬ ಅರ್ಥವು ಉಂಟಾಗುತ್ತದೆ. **ಬಹ್ವೀಃ** ಎಂದರೆ ಸುಖ–ದುಃಖ–ಮೋಹ ರೂಪವಾಗಿರುವ ಎಂದರ್ಥ. **ಪ್ರಜಾಃ** ಎಂದರೆ ಪ್ರಕರ್ಷವಾಗುವ ಅಂದರೆ ವ್ಯಕ್ತವಾಗುವ ಮಹತ್ತು ಮುಂತಾದ ವಿಕಾರಗಳು. ಈ ಪದಾರ್ಥಗಳು ಪರಿಣಾಮರೂಪವಾಗಿ ಪ್ರಕೃತಿಯಿಂದ ಉಂಟಾಗುತ್ತವೆ.

ಈ ಮಂತ್ರಕ್ಕೆ ಇನ್ನೊಂದು ಅರ್ಥವನ್ನೂ ಮಾಡಬಹುದು: ಕೆಂಪು ಮುಂತಾದ ಬಣ್ಣಗಳನ್ನು ಹೊಂದಿರುವ ಒಂದು ಮೇಕೆಯು ತನ್ನಂತೆಯೇ ಇರುವ ಮೇಕೆ ಅಥವಾ ಹೋತಗಳನ್ನು ಹಡೆಯುತ್ತದೆ. ಹಾಗೆಯೇ ಈ ಪ್ರಕೃತಿಯೂ ಮೂರು ಬಣ್ಣಗಳಿಂದ ಕೂಡಿದುದಾಗಿ ಅದಕ್ಕೆ ಸದೃಶವಾದ ವಿಕಾರಸಮೂಹವನ್ನು ಪರಿಣಾಮವಿಧಾನದಿಂದ ಉಂಟುಮಾಡುತ್ತದೆ. ಇಲ್ಲಿ ಹೇಳಿರುವ ತತ್ತ್ವಾರ್ಥವು ಹೀಗಿದೆ: ಪರಮಾರ್ಥರೂಪವಾಗಿ ಚಿದ್ರೂಪನಾದ ಪುರುಷನು (ಜೀವನು) ಸಂಗರಹಿತನು. ವಿಕಾರಗಳು ಅಂದರೆ ಭೋಗಗಳು ಚಿತ್ತದ ಧರ್ಮಗಳು. ಇದರರ್ಥ ಚೈತನ್ಯರೂಪಿ ಪುರುಷನಿಗೂ ಚಿತ್ತದ ಧರ್ಮಗಳಾದ ವಿಕಾರಗಳಿಗೂ ಪಾರಮಾರ್ಥಿಕವಾಗಿ ನೇರವಾದ ಸಂಬಂಧ ಇಲ್ಲ. ಹಾಗೆ ಕಾಣುವುದು ಕೇವಲ ಭ್ರಮಾರೂಪದ ಸಂಬಂಧ ಅಷ್ಟೆ. ಕೆಂಪು ದಾಸವಾಳದ ಹೂವು ಪಕ್ಕದಲ್ಲಿದ್ದರೆ ಸ್ಫಟಿಕಕ್ಕೆ ಕೂಡ ಕೆಂಪು ಬಣ್ಣ ಬರುತ್ತದೆ. ಅದೇ ರೀತಿ, ಚಿತ್ತದ ಧರ್ಮಗಳನ್ನು ತನ್ನ ಮೇಲೆ ಆರೋಪಿಸಿಕೊಂಡು, ತನಗೂ ಚಿತ್ತಕ್ಕೂ ಇರುವ ಭೇದವನ್ನು ಗ್ರಹಿಸದೆ, ತಾನು "ಶಾಂತನು, ದುಃಖಿತನು ಅಥವಾ ಮೂಢನು" ಎಂದು ಪುರುಷನು ಅಂದುಕೊಳ್ಳುತ್ತಾನೆ. ನಿಜವಾಗಿಯೂ ಆ ಸ್ಥಿತಿಗಳು ಚಿತ್ತದ ಗುಣಗಳು, ತನ್ನವಲ್ಲ ಎಂದು ಮರೆತುಬಿಡುತ್ತಾನೆ. ಇದನ್ನೇ **'ಕುಸುಮವಚ್ಚ ಮಣಿಃ'** (ಕುಸುಮದಂತೆ ಮಣಿಯು) ಎಂದು ಸಾಂಖ್ಯಸೂತ್ರದಲ್ಲಿ ಹೇಳಲಾಗಿದೆ. ಒಬ್ಬ ವ್ಯಕ್ತಿಯು ಕೊಳೆಯಿಂದ ಕೂಡಿರುವ ಕನ್ನಡಿಯಲ್ಲಿ ಪ್ರತಿಬಿಂಬಿತವಾದ ಮುಖದಲ್ಲಿ, ಕೊಳೆಯು ಆರೋಪಿತವಾಗುವುದರಿಂದ, ತಾನು ಕೊಳೆಯುಳ್ಳವನೆಂದು ಶೋಕಪಡುವಂತೆ ಇದು. ಸಾಂಖ್ಯಪ್ರವಚನ ಭಾಷ್ಯದಲ್ಲಿ 'ಮೋಕ್ಷ' ಪದದ ಅರ್ಥವನ್ನು ಹೀಗೆ ವಿವರಿಸಲಾಗಿದೆ: **ಯಃ ಪುರುಷಸ್ಯ ಅಪವರ್ಗ ಉಕ್ತಃ ಸಃ ಪ್ರತಿಬಿಂಬರೂಪಸ್ಯ ಮಿಥ್ಯಾದುಃಖಸ್ಯ ವಿಯೋಗ ಏವ** – ಪುರುಷನಿಗೆ ಮೋಕ್ಷವೆಂದು ಹೇಳಿರುವುದು ಪ್ರತಿಬಿಂಬರೂಪವಾದ ಮಿಥ್ಯಾದುಃಖದ ವಿಯೋಗವೇ.

## ಮೋಕ್ಷ ವರ್ಣನೆ

ಆದುದರಿಂದ ಪುರುಷನ ಭೋಗವು ಉಪಾಧಿಯಿಂದ ಉಂಟಾದುದು, ವಾಸ್ತವಿಕವಾದುದಲ್ಲ. ಚೇತನನಾದ ಪುರುಷನು ಶುದ್ಧನು ಮತ್ತು ಅನೇಕನು. ಜಡವಾದ ಪ್ರಕೃತಿಯು ಸಾಂತವಾಗಿದ್ದು ಕೊಳೆಯಿಂದ ಕೂಡಿರುತ್ತದೆ. ಭೋಗವು ಮುಗಿದ ಮೇಲೆ ಪುರುಷನಿಗೆ ಮೋಕ್ಷವನ್ನು ಉಂಟುಮಾಡುವುದು ಪ್ರಕೃತಿಯೇ. ಅಂದರೆ ಭೋಗವು ಮುಗಿದ ಮೇಲೆ ಪ್ರಕೃತಿಯೇ ನಿವೃತ್ತವಾಗುತ್ತದೆ. ಪ್ರಕೃತಿಯು ಅಧಿಕಾರವು ಅಲ್ಲಿಗೆ ಮುಗಿಯುತ್ತದೆ. ಇದೇ ಪುರುಷನ ಮೋಕ್ಷವೆನಿಸುತ್ತದೆ. ಪ್ರಕೃತಿಯು ಯಾವ ಪುರುಷನಿಗೆ ಭೋಗ–ಮೋಕ್ಷಗಳನ್ನು ಉಂಟುಮಾಡುತ್ತದೆಯೋ ಅಂತಹ ಪುರುಷನ ವಿಷಯದಲ್ಲಿ ಪ್ರಕೃತಿಯು ಕೃತಾರ್ಥವಾಗುತ್ತದೆ. ಇದನ್ನೇ ಶಾಸ್ತ್ರದಲ್ಲಿ **ಪ್ರಕೃತಿಲಯ** ಅಥವಾ **ಪ್ರಕೃತಿನಾಶ**ವೆಂದು ಹೇಳುತ್ತಾರೆ. ಉಳಿದ ಪುರುಷರು ಪ್ರಕೃತಿ–ಪುರುಷ ವಿವೇಕವಿಲ್ಲದ ಕಾರಣ ಬದ್ಧರಾಗಿಯೇ ಇರುತ್ತಾರೆ. ಪ್ರಕೃತಿಯ ಮೂಲಕವೇ ಹೀಗೆ ಪುರುಷರ ಬಂಧ–ಮೋಕ್ಷಗಳ ವ್ಯವಸ್ಥೆಯು ಉಂಟಾಗುತ್ತದೆ.

ಚೇತನನಾದ ಪುರುಷನಿಂದ ಅಧಿಷ್ಠಿತವಾಗದೆ ಅಚೇತನವಾಗಿದ್ದರೂ **ಪ್ರಕೃತಿ** ಅಥವಾ **ಪ್ರಧಾನ**ವು ಮಹತ್ ಮುಂತಾದ ರೂಪದಿಂದ ಪರಿಣಾಮ ಹೊಂದುವುದು ಪುರುಷಾರ್ಥಕ್ಕಾಗಿ, ಅಂದರೆ ಪುರುಷನ ಸಲುವಾಗಿಯೇ. ಚಲನೆಯಲ್ಲಿ ಇರದ ಸೂಜಿಗಲ್ಲು(ಅಯಸ್ಕಾಂತ) ಹೇಗೆ ತನ್ನ ಬಳಿ ಇರುವ ಲೋಹಕ್ಕೆ (ಕಬ್ಬಿಣಕ್ಕೆ) ಚಲನೆಯನ್ನು ಉಂಟುಮಾಡುತ್ತದಯೋ, ಹಾಗೆಯೇ ಯಾವ ವ್ಯವಹಾರವೂ ಇಲ್ಲದ ಪುರುಷನ ಸನ್ನಿಧಿ ಮಾತ್ರದಿಂದ ಪ್ರಕೃತಿಯಲ್ಲಿ ವ್ಯವಹಾರವು ಉಂಟಾಗುತ್ತದೆ. ಕುಂಟ ಮತ್ತು ಕುರುಡರ ದೃಷ್ಟಾಂತದಿಂದ ಪ್ರಕೃತಿ–ಪುರುಷರ ಸಂಬಂಧವನ್ನು ವಿವರಿಸಬಹುದು. ಕುರುಡನು ಕುಂಟನನ್ನು ತನ್ನ ಹೆಗಲಿಗೆ ಏರಿಸಿಕೊಳ್ಳುತ್ತಾನೆ. ಮೇಲಿರುವ ಕುಂಟನು ದಾರಿಯನ್ನು ತೋರಿಸುತ್ತಾನೆ. ಆಗ ಕುರುಡ ಮತ್ತು ಕುಂಟರಿಬ್ಬರೂ ತಾವು ಸೇರಬೇಕಾದ ಸ್ಥಾನವನ್ನು ಹೊಂದುತ್ತಾರೆ. ಭೋಗ್ಯವಾದ ಪ್ರಕೃತಿಯು ಭೋಕ್ತೃವಾದ ಪುರುಷನನ್ನು ಅಪೇಕ್ಷಿಸುತ್ತದೆ. ಪುರುಷ ಕೂಡ ಪ್ರಕೃತಿ–ಪುರುಷರ ಭೇದವನ್ನು ತಿಳಿಯದಿರುವುದರಿಂದ, ಬುದ್ಧಿಯ ಛಾಯೆಯನ್ನು ಹೊಂದುತ್ತಾನೆ; ಅದರಿಂದ ಬುದ್ಧಿಯಲ್ಲಿನ ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ಎಂಬ ಮೂರುವಿಧದ ದುಃಖಗಳನ್ನು ನಿವಾರಿಸುವ ಕೈವಲ್ಯವನ್ನು ಅಪೇಕ್ಷಿಸುತ್ತಾನೆ. ಇದು ಪ್ರಕೃತಿ–ಪುರುಷ ವಿವೇಕಮಾತ್ರದಿಂದ ಉಂಟಾಗುತ್ತದೆ. ಆದಕಾರಣ ಕೈವಲ್ಯಕ್ಕಾಗಿ ಪುರುಷನು ಪ್ರಕೃತಿಯನ್ನು ಅಪೇಕ್ಷಿಸುತ್ತಾನೆ. ದುಷ್ಟರಿಂದಾದ ಭಯದಿಂದ ಕುಂಟ ಮತ್ತು ಕುರುಡರು ದೈವವಶಾತ್ ಸಂಯೋಗವನ್ನು ಹೊಂದುತ್ತಾರೆ. ಹೀಗೆ ಪರಸ್ಪರ ಅವಲಂಬನೆಯಿಂದ ಪ್ರಕೃತಿ–ಪುರುಷರ ಸಂಯೋಗ ಉಂಟಾಗುವುದರಿಂದ ಸೃಷ್ಟಿಯು ಉಂಟಾ